## ಕರ್ನಾಟಕ ವಿಧಾನ ಪರಿಷತ್ತು

<table>
<tr><td colspan="2">ನಿಯಮ-72ರಡಿಯ ಸೂಚನೆ</td></tr>
<tr><td>ಸೂಚನೆ ನೀಡಿದ ಮಾನ್ಯ ಸದಸ್ಯರುಗಳ ಹೆಸರು</td><td>ಶ್ರೀ ಡಿ.ಎಸ್.ಅರುಣ್, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು</td></tr>
</table>

### ಸೂಚನೆಯ ವಿಷಯ

ಕರ್ನಾಟಕ ಸರ್ಕಾರದ ವಿವಿಧ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಆಯ್ಕೆ ಪ್ರಕ್ರಿಯೆಯನ್ನು ನಡೆಸುವ ಸಲುವಾಗಿ ಸ್ಥಾಪಿತಗೊಂಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಹಲವಾರು ಹಗರಗಣಗಳಲ್ಲಿ ಸಿಲುಕಿಕೊಂಡಿದ್ದು, ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿಕೊಡುವಲ್ಲಿ ವಿಫಲವಾಗಿವುದರಿಂದ ಪ್ರಾಧಿಕಾರದ ಮೇಲೆ ವಿದ್ಯಾರ್ಥಿಗಳು ಮತ್ತು ಪೋಷಕರು ನಂಬಿಕೆ ಕಳೆದುಕೊಂಡಿರುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

### ಉತ್ತರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2022ರಿಂದ ಇಲ್ಲಿಯವರೆಗೆ 09 ಇಲಾಖೆಗಳು/ನಿಗಮ, ಮಂಡಳಿಗಳಲ್ಲಿರುವ ಖಾಲಿ ಹುದ್ದೆಗಳ ನೇಮಕಾತಿಗಾಗಿ ಪರೀಕ್ಷೆಗಳನ್ನು ನಡೆಸಿ ಮೆರಿಟ್ ಲಿಸ್ಟ್ ಹಾಗೂ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುತ್ತದೆ. ಪ್ರಸ್ತುತ 10 ಇಲಾಖೆಗಳು/ ನಿಗಮ, ಮಂಡಳಿಗಳ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ವಿಧಾನ ಸಭೆಯ ವಿವಿಧ ಖಾಲಿ ಹುದ್ದೆಗಳಿಗೂ ಸಹ ನೇರ ನೇಮಕಾತಿಗಾಗಿ ಪರೀಕ್ಷೆಯನ್ನು ಪ್ರಾಧಿಕಾರದಿಂದ ನಡೆಸಿ, ಮೆರಿಟ್ ಪಟ್ಟಿಯನ್ನು ಪ್ರಕಟಿಸಿ ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಲಾಗಿದೆ. ಈ ಸಂಬಂಧ ಅಂದಿನ ವಿಧಾನ ಸಭೆಯ ಸಭಾಧ್ಯಕ್ಷರು ದಿನಾಂಕ:19-04-2023ರ ಪತ್ರದ ಮೂಲಕ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಹಾಗೂ ಯಶಸ್ವಿಯಾಗಿ ನಡೆಸಿರುವ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಯಾವುದೇ ರೀತಿಯ ಹಗರಣ ನಡೆದಿರುವುದಿಲ್ಲ.

ಇಡಿ 89 ಟಿಇಸಿ 2024

(ಡಾ.ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು

## ಪೂರ್ಣಗೊಂಡಿರುವ ನೇಮಕಾತಿ ಪರೀಕ್ಷೆಗಳು

| ಕ್ರಮ ಸಂಖ್ಯೆ | ಇಲಾಖೆ/ ಹುದ್ದೆ | ಅಧಿಸೂಚನೆ ದಿನಾಂಕ | ಹುದ್ದೆಗಳ ಸಂಖ್ಯೆ | ಸ್ಪರ್ಧಾತ್ಮಕ ಪರೀಕ್ಷಾ ದಿನಾಂಕ | ಮೆರಿಟ್ ಪಟ್ಟಿ ಪ್ರಕಟ ದಿನಾಂಕ | ಆಯ್ಕೆ ಪಟ್ಟಿ ದಿನಾಂಕ |
|---|---|---|---|---|---|---|
| 1 | ಕಾಲೇಜು ಶಿಕ್ಷಣ ಇಲಾಖೆ – ಸಹಾಯಕ ಪ್ರಾಧ್ಯಾಪಕರ ನೇಮಕಾತಿ | 30.09.2021 | 1242 | 12-03-2022 ರಿಂದ 16-03-2022 | 10.09.2022 | 03.03.2023 |
| 2 | ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ | 16.06.2022 | 76 | 29-01-2023 ರಿಂದ 07-02-2023 | 20.04.2023 | 16.06.2023 |
| 3 | ಕರ್ನಾಟಕ ರಾಜ್ಯ ಬೀಜ ನಿಗಮ | 16.06.2022 | 32 | 30-01-2023 ರಿಂದ 04-02-2023 | 19.04.2023 | 16.06.2023 |
| 4 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | 16.06.2022 | 1492 | 23.07.2022 ರಿಂದ 07.08.2022 | 07.02.2023 | |
| 5 | ಪಶುಪಾಲನ ಮತ್ತು ಪಶು ಸಂಗೋಪನಾ ಇಲಾಖೆ-ಪಶುವೈದ್ಯಕೀಯ ಸಹಾಯಕರು | 23.09.2022 | 250 | 29.01.2023 | 20.04.2023 | 16.06.2023 |
| 6 | ಕರ್ನಾಟಕ ವಿಧಾನ ಸಭೆ ಸಚಿವಾಲಯ | 25.11.2022 | 57 | 5.12.2022 ರಿಂದ 07.12.2022 | 15.02.2023 | |
| 7 | ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಮಂಡಳಿ–ಎಸ್.ಡಿ.ಎ | 15.12.2022 | 30 | 30.01.2023 ರಿಂದ 01.02.2023 | 26.04.2023 | |
| 8 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ– ಪಶುವೈದ್ಯ ಅಧಿಕಾರಿ ಹುದ್ದೆಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆ | 15.06.2023 | | 30.07.2023 | 08.09.2023 | |
| 9 | ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ | 31.05.2023 | 236 | 22.07.2023 ರಿಂದ 30.07.2023 | 31.10.2023 | |

## ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿ ಪರೀಕ್ಷೆಗಳು

| ಕ್ರಮ ಸಂಖ್ಯೆ | ಇಲಾಖೆ/ ಹುದ್ದೆ | ಅಧಿಸೂಚನೆ ದಿನಾಂಕ | ಹುದ್ದೆಗಳ ಸಂಖ್ಯೆ | ಸ್ಪರ್ಧಾತ್ಮಕ ಪರೀಕ್ಷಾ ದಿನಾಂಕ |
|---|---|---|---|---|
| 1 | ಕಾಲೇಜು ಶಿಕ್ಷಣ ಇಲಾಖೆ – ಪ್ರಾಂಶುಪಾಲರು (ಯುಜಿ) | 13.12.2022 | 300 | 30.07.2023 |
| 2 | ಎಂ.ಎಸ್.ಐ.ಎಲ್ | 20.06.2022 | 72 | 28.10.2023 ರಿಂದ 24.11.2023 |
| 3 | ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ | 20.06.2022 | 386 | 28.10.2023 ರಿಂದ 25.11.2023 |
| 4 | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ | 20.06.2022 | 186 | 28.10.2023 ರಿಂದ 23.11.2023 |
| 5 | **KEONICS** | 20.06.2022 | 26 | 28.10.2023 ರಿಂದ 23.11.2023 |
| 6 | ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಮಂಡಳಿ– ಕಲ್ಯಾಣ ಸಂಘಟಿಕರು | | 14 | 28.10.2023 |
| 7 | ಪೋಲಿಸ್ ಇಲಾಖೆಯ– ಪಿ.ಎಸ್.ಐ ಮರು ಪರೀಕ್ಷೆ | 22.11.2023 | 545 | 23.01.2024 |
| 8 | ಕೆ–ಸೆಟ್–2023 | 29.08.2023 | | 13.01.2024 |
| 9 | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ | 29.12.2023 | 41 | 17.02.2024 |
| 10 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 07.12.2023 | 394 | 18.02.2024 |